# ಸಂರಕ್ಷಣಾ ನೀತಿ ಹೇಳಿಕೆ

ಬ್ರಿಟಿಷ್ ಕೌನ್ಸಿಲ್ ಒಂದು ಸಾಂಸ್ಕೃತಿಕ ಸಂಬಂಧಗಳು ಮತ್ತು ಶೈಕ್ಷಣಿಕ ಅವಕಾಶಗಳಿಗಾಗಿ ಇರುವ ಯುನೈಟೆಡ್ ಕಿಂಗ್‌ಡಮ್‌ನ ಅಂತರರಾಷ್ಟ್ರೀಯ ಸಂಸ್ಥೆಯಾಗಿದೆ.

ಅನೇಕ ಕಾರಣಗಳಿಂದಾಗಿ ನಾವು ನಮ್ಮ ಕೆಲಸವನ್ನು ಮಾಡುವ ಸಮಯದಲ್ಲಿ ತೊಂದರೆಗೆ ಒಳಗಾಗಬಹುದಾದ ಮಕ್ಕಳು ಮತ್ತು ವೃದ್ಧರನ್ನು ಭೇಟಿ ಮಾಡುತ್ತೇವೆ, ನಮ್ಮ ಜೊತೆಗೆ ಅವರು ಸಂಪರ್ಕಕ್ಕೆ ಬಂದಂತಹ ಸಮಯದಲ್ಲಿ ಅವರು ಯಾವುದೇ ಶೋಷಣೆಯನ್ನು ಅನುಭವಿಸದಂತಹ ವಾತಾವರಣವನ್ನು ಸೃಷ್ಟಿಸುವುದು ನಮ್ಮ ಗುರಿಯಾಗಿರುತ್ತದೆ.

ನಾವು ಸಮಂಜಸವಾಗಿ ಕಾರ್ಯಸಾಧ್ಯವಾಗುವ ಕಡೆಯಲ್ಲಿ, ಸಂಬಂಧಿತ ಯುಕೆ ಮತ್ತು ಅಂತರರಾಷ್ಟ್ರೀಯ ಕಾನೂನುಗಳು ಹಾಗೂ ಮಾನದಂಡಗಳು ಎರಡನ್ನೂ ಅನುಸರಿಸುತ್ತೇವೆ, ಜೊತೆಗೆ ಸ್ಥಳೀಯ ಕಾನೂನು ಅನುಸರಣೆಯನ್ನು ಖಚಿತಪಡಿಸಿಕೊಳ್ಳುತ್ತೇವೆ.

# ಬ್ರಿಟಿಷ್ ಕೌನ್ಸಿಲ್ ಇದಕ್ಕೆ ಬದ್ಧವಾಗಿದೆ:

- ಮಕ್ಕಳು ಮತ್ತು ವಯಸ್ಕರನ್ನು ಗೌರವಿಸುವುದು ಹಾಗೂ ಆಲಿಸುವುದು, ಗೌಪ್ಯತೆಯನ್ನು ಕಾಪಾಡಿಕೊಳ್ಳುವುದು ಮತ್ತು ಪ್ರಮಾಣಾನುಗುಣವಾಗಿ ವರ್ತಿಸುವುದು
- ಬಲವಾದ ರಕ್ಷಣಾ ವ್ಯವಸ್ಥೆಗಳೊಂದಿಗೆ ಕಾರ್ಯವಿಧಾನಗಳನ್ನು ನಿರ್ವಹಿಸುವುದು ಹಾಗೂ ಯೋಜಿಸುವುದು, ಅಪಾಯದ ಮೌಲ್ಯಮಾಪನ ಮತ್ತು ಸಂರಕ್ಷಣಾ ವ್ಯವಸ್ಥೆಗಳ ಮೂಲಕ ದುರುಪಯೋಗ ಸಂಭವಿಸಬಹುದಾದ ಸಂದರ್ಭಗಳನ್ನು ಕಡಿಮೆ ಮಾಡುವುದು ಮತ್ತು ನಿರ್ವಹಿಸುವುದು
- ಇದರಲ್ಲಿ ಒಳಗೊಂಡಿರುವ ಪಕ್ಷಗಳ ಜೊತೆಗೆ ಅವರ ಕಾಳಜಿ ಹಾಗೂ ಸಂರಕ್ಷಣೆಯ ಬಗ್ಗೆ ಮಾಹಿತಿ ಹಂಚಿಕೊಳ್ಳುವುದು ಹಾಗೂ ಸೂಕ್ತವೆನಿಸಿದಲ್ಲಿ ಅದರಲ್ಲಿ ಮಕ್ಕಳು ಹಾಗೂ ವೃದ್ಧರನ್ನು ಸೇರಿಸಿಕೊಳ್ಳುವುದು
- ಶಂಕಿತ ದುರುಪಯೋಗವನ್ನು ಸಕ್ರಿಯವಾಗಿ ತನಿಖೆ ಮಾಡುವುದು

ಎಲ್ಲಾ ಸಿಬ್ಬಂದಿ ತಮ್ಮ ನಡವಳಿಕೆಯು ಈ ನೀತಿಯೊಂದಿಗೆ ಸ್ಥಿರವಾಗಿದೆ ಎಂದು ಖಚಿತಪಡಿಸಿಕೊಳ್ಳುವುದನ್ನು ನಾವು ಬಯಸುತ್ತೇವೆ. ಕಕ್ಷಿದಾರರು, ಗ್ರಾಹಕರು, ಪಾಲುದಾರರು ಮತ್ತು ಪೂರೈಕೆದಾರರು ಈ ನೀತಿಯ ಬಗ್ಗೆ ತಿಳಿದಿರಬೇಕು ಮತ್ತು ಅದರೊಳಗೆ ಕಾರ್ಯನಿರ್ವಹಿಸಬೇಕು ಎನ್ನುವುದನ್ನೂ ನಾವು ಬಯಸುತ್ತೇವೆ.

ಈ ನೀತಿಯನ್ನು ಕಾರ್ಯಗತಗೊಳಿಸಲು ನಾವು ಸಾಕಷ್ಟು ಮತ್ತು ಸೂಕ್ತವಾದ ಸಂಪನ್ಮೂಲಗಳನ್ನು ಒದಗಿಸುತ್ತೇವೆ ಹಾಗೂ ಅದನ್ನು ಸಂಸ್ಥೆಯಾದ್ಯಂತ ಸಂವಹನ ನಡೆಸುತ್ತೇವೆ ಮತ್ತು ಎಲ್ಲಾ ಸಿಬ್ಬಂದಿಗೆ ಅರ್ಥವಾಗುವಂತೆ ನೋಡಿಕೊಳ್ಳುತ್ತೇವೆ

ಹೊಸ ಕಾನೂನು ಮತ್ತು ನಿಯಂತ್ರಕ ಬೆಳವಣಿಗೆಗಳನ್ನು ಪ್ರತಿಬಿಂಬಿಸಲು ಮತ್ತು ಉತ್ತಮ ಅಭ್ಯಾಸವನ್ನು ಖಚಿತಪಡಿಸಿಕೊಳ್ಳಲು ಬ್ರಿಟಿಷ್ ಕೌನ್ಸಿಲ್ ವಾರ್ಷಿಕವಾಗಿ ಈ ಜಾಗತಿಕ ನೀತಿ ಹೇಳಿಕೆಯನ್ನು ಪರಿಶೀಲಿಸುತ್ತದೆ.